# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583105

**ಕುಲಸಚಿವರು (ಮೌಲ್ಯಮಾಪನ)** ದೂರವಾಣಿ: 08392–241011


ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ಬಿ.ಇಡಿ/ಮವ.ಛಾಪ್ರ.ಮಮಾ/2024–25/2549 ದಿನಾಂಕ: 14.03.2025

## ಅಧಿಸೂಚನೆ

ವಿಷಯ: ಬಿ.ಇಡಿ ಪದವಿಯ ಜನವರಿ–2025ರ ತಿಂಗಳಿನಲ್ಲಿ ಜರುಗಿದ 2ನೇ ಮತ್ತು 4ನೇ ಸೆಮಿಸ್ಟರ್ (NEP) ಪರೀಕ್ಷೆಯ ಉತ್ತರ ಪತ್ರಿಕೆಗಳ ಮರು ಎಣಿಕೆ, ಛಾಯಾಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 14.03.2025

****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಜನವರಿ–2025ರ ತಿಂಗಳಿನಲ್ಲಿ ಜರುಗಿದ ಬಿ.ಇಡಿ. ಪದವಿಯ 2ನೇ ಮತ್ತು 4ನೇ ಸೆಮಿಸ್ಟರ್‌ನ (NEP) ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವ ದಿನಾಂಕಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ | ವಿವರ | ಕೋರ್ಸ್ | ಅರ್ಜಿ ಸಲ್ಲಿಸುವ ದಿನಾಂಕ ಹಾಗೂ ಕೊನೆಯ ದಿನಾಂಕ |
|---|---|---|---|
| 1. | ಮರು ಎಣಿಕೆ | ಒಂದು ವಿಷಯಕ್ಕೆ ರೂ. 440.00 | 17.03.2025 ರಿಂದ 19.03.2025 |
| 2. | ಛಾಯಾ ಪ್ರತಿ | ಒಂದು ವಿಷಯಕ್ಕೆ ರೂ. 1,000.00 | 20.03.2025 ರಿಂದ 22.03.2025 |
| 3. | ಮರು ಮೌಲ್ಯಮಾಪನ | ಒಂದು ವಿಷಯಕ್ಕೆ ರೂ. 1,650.00 | 23.03.2025 ರಿಂದ 26.03.2025 |

**ಸೂಚನೆಗಳು:**

1. ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ಬಯಸುವ 2ನೇ ಮತ್ತು 4ನೇ ಸೆಮಿಸ್ಟರ್‌ನ NEP ವಿದ್ಯಾರ್ಥಿಗಳು UUCMS ಮೂಲಕ ನಿಗಧಿತ ದಿನಾಂಕದೊಳಗೆ ಅರ್ಜಿ ಸಲ್ಲಿಸತಕ್ಕದ್ದು.
2. ಆನ್‌ಲೈನ್ ಪೋರ್ಟ್‌ಲ್‌ನಲ್ಲಿ ಫಲಿತಾಂಶ ವೀಕ್ಷಿಸಿದ ನಂತರ, ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನ ಆಯ್ಕೆಗಳಲ್ಲಿ ಯಾವುದು ಬೇಕೊ ಅದನ್ನು ಆಯ್ಕೆ ಮಾಡಿ click ಮಾಡಬೇಕು.
3. ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಯಾವ ಯಾವ ವಿಷಯಗಳಲ್ಲಿ ಅರ್ಜಿ ಸಲ್ಲಿಸಬೇಕೊ ಅವುಗಳನ್ನು ಆಯ್ಕೆ ಮಾಡಿಕೊಳ್ಳುವುದು.
4. ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಯಾವ ಯಾವ ವಿಷಯಗಳಲ್ಲಿ ಅರ್ಜಿ ಸಲ್ಲಿಸಲು ಆಯ್ಕೆ ಮಾಡಿದ ತಕ್ಷಣ ಅದಕ್ಕೆ ಸಂಬಂಧಿಸಿದ ಶುಲ್ಕ ಪ್ರಕಟಗೊಳ್ಳುವುದು. ನಂತರ ಶುಲ್ಕವನ್ನು ಪಾವತಿಸುವ ಬಗೆಯನ್ನು ಆಯ್ದುಕೊಂಡ ಮೇಲೆ ಅರ್ಜಿ ಹಾಗೂ ಚಲನ್‌ಗಳ ಮುದ್ರಿತ ಪ್ರತಿಯನ್ನು ತೆಗೆದುಕೊಂಡು UUCMS ಮೂಲಕ ಶುಲ್ಕವನ್ನು ಪಾವತಿಸಿ, ಅರ್ಜಿ ಹಾಗೂ ಚಲನ್ ಪ್ರತಿಯನ್ನು ತಮ್ಮ ಬಳಿ ಇರಿಸಿಕೊಳ್ಳತಕ್ಕದ್ದು.
5. ಶುಲ್ಕ ಪಾವತಿಸಿದ ನಂತರ ಬರುವ "Unique Application Number"ನ್ನು ವಿಶ್ವವಿದ್ಯಾಲಯದ ಜೊತೆ ಮಾಡುವ ಪತ್ರ ವ್ಯವಹಾರಗಳಲ್ಲಿ ನಮೂದಿಸಬೇಕು.
6. ಬಿ.ಇಡಿ 2ನೇ ಹಾಗೂ 4ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಛಾಯ ಪ್ರತಿಗಳನ್ನು ವಿದ್ಯಾರ್ಥಿಗಳ UUCMS login ಮೂಲಕ ಪರಿಶೀಲಿಸತಕ್ಕದ್ದು.
7. ಬಿ.ಇಡಿ 2ನೇ ಹಾಗೂ 4ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಮರುಮೌಲ್ಯಮಾಪನದ ಫಲಿತಾಂಶವನ್ನು UUCMS ಮೂಲಕ ನೀಡಲಾಗುವುದು.
8. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.
9. **ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರಳಿಸಲಾಗುವುದಿಲ್ಲ.**

ಕುಲಸಚಿವರು (ಮೌಲ್ಯಮಾಪನ)
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ.

ಗೆ,

ಸಂಬಂಧಿಸಿದ ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ – ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ರವರಿಗೆ ಮಾಹಿತಿಗಾಗಿ.
2. ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ರವರಿಗೆ ಮಾಹಿತಿಗಾಗಿ.
3. ನಿರ್ದೇಶಕರು, UUCMS ವಿಭಾಗ, ಬೆಂಗಳೂರು.
4. ಕಛೇರಿ ಪ್ರತಿ.

Scanned with OKEN Scanner